ಸಂಪಾದಕೀಯ

# ಬದುಕಿಗೆ ದಾರಿದೀಪ ಭಗವದ್ಗೀತೆ



ಹಲವರು ಬಾಲ್ಯದಿಂದಲೇ ಗೀತೆಯನ್ನು ಬಾಯಿಪಾಠ ಮಾಡಿರುತ್ತಾರೆ. ಕುತೂಹಲಕ್ಕಾಗಿ 'ಗೀತೆಯಲ್ಲಿ ಏನಿದೆ — ನೋಡೋಣ' ಎಂದು ಪುಸ್ತಕ ತೆರೆದು, ಕೆಲವು ಭಾಗಗಳನ್ನು ಓದಿದವರಿದ್ದಾರೆ. ಲೇಖನ, ಪ್ರವಚನ, ಚರ್ಚೆ-ಸಂವಾದಗಳ ನಡುವೆ ಗೀತೆಯ ವಾಕ್ಯಗಳನ್ನು ಯಾರಾದರೂ ಉದ್ಧರಿಸಿದರೆ, ಗೀತಾವಾಕ್ಯಗಳನ್ನು 'ಎಲ್ಲೋ' ಕೇಳಿದರೆ ಅನೇಕರಲ್ಲಿ ಅದನ್ನೋದಬೇಕೆಂಬ ತವಕ ಮೂಡುತ್ತದೆ. ಹೀಗೆ ಒಂದಲ್ಲ ಒಂದು ಸಂದರ್ಭದಲ್ಲಿ ನಾವೆಲ್ಲ ಗೀತೆಯನ್ನು ಓದುವ ಪ್ರಯತ್ನ ಮಾಡಿರುತ್ತೇವೆ. ಪೂರ್ಣವಾಗಿ ಗೀತೆಯನ್ನೋದಿ, ಅದರ ಅರ್ಥವನ್ನರಿತು, ಹೃದ್ಗತ ಮಾಡಿಕೊಂಡ ಧನ್ಯಜೀವಿಗಳು ಕೆಲವರಾದರೂ ನಮ್ಮ ನಡುವೆ ಇರಬಹುದು. ಭಾರತದಲ್ಲಿ ಹುಟ್ಟಿ ಬೆಳೆದು, ಬಾಳಿ ಬದುಕಿದ ಪ್ರತಿಯೊಬ್ಬರೂ ಕೂಡ ಒಂದಲ್ಲ ಒಂದು ಸಂದರ್ಭದಲ್ಲಿ ಓದುವ, ಓದಬೇಕಾದ ಗ್ರಂಥವೇ 'ಭಗವದ್ಗೀತೆ'. ಈ ಗ್ರಂಥಕ್ಕೆ ಅಷ್ಟೊಂದು ಪೂಜ್ಯ ಸ್ಥಾನ ಏಕೆ ಬಂತು? ಅದೇಕೆ ಇಷ್ಟೊಂದು ಜನಪ್ರಿಯತೆಯನ್ನು ಗಳಿಸಿತು? ಯಾವ ಜಾಹೀರಾತೂ ಇಲ್ಲದೆ ಗೀತೆಯ ಪುಸ್ತಕಗಳು ಉಳಿದೆಲ್ಲ ಕೃತಿಗಳಿಗಿಂತ ಹೆಚ್ಚು ಮಾರಾಟವಾಗುತ್ತಿವೆ, ಏಕೆ? — ಈ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳಲು ನಾವು ಗೀತೆಯ ಅಂತರಾರ್ಥವನ್ನು ಸಮಗ್ರ ದೃಷ್ಟಿಯಿಂದ ನೋಡಬೇಕು.

## ಗೀತೆಯ ರಚನೆಯ ಹಿನ್ನೆಲೆ

'ಭಗವದ್ಗೀತೆ'ಗೆ ಎಲ್ಲಕ್ಕಿಂತ ಹೆಚ್ಚಿನ ಪ್ರಾಶಸ್ತ್ಯ ಲಭಿಸಿರುವುದು ಅದು ಭಗವಂತನ ವಾಣಿ ಎಂಬುದರಿಂದ. ಶ್ರೀಕೃಷ್ಣ ಪರಮಾತ್ಮ ಭಾರತದಲ್ಲಿ ಅತ್ಯಂತ ಜನಪ್ರಿಯನಾದ ದೈವೀ ವ್ಯಕ್ತಿ; ಅವತಾರ ಪುರುಷ. ಐತಿಹಾಸಿಕವಾಗಿಯೂ ಶ್ರೀಕೃಷ್ಣನೆಂಬ ವ್ಯಕ್ತಿಯೊಬ್ಬನಿದ್ದ ಎಂದು ಅನೇಕರು ಖಚಿತಪಡಿಸುತ್ತಾರೆ. ಧಾರ್ಮಿಕ-ನೈತಿಕ ಬದುಕಿನಲ್ಲಿ ಹಾಗೂ ರಾಜಕೀಯವಾಗಿ ಭಾರತದ ಜನಜೀವನ ಅಲ್ಲೋಲ ಕಲ್ಲೋಲವಾಗಿದ್ದ ಸಂದರ್ಭದಲ್ಲೇ ಶ್ರೀಕೃಷ್ಣ ಹುಟ್ಟಿಬಂದ. ಲೋಕಕಂಟಕರಾದ ಕಂಸನಂತಹ, ಜರಾಸಂಧನಂತಹ, ದುರ್ಯೋಧನನಂತಹ ನಿರಂಕುಶ ರಾಜಂದಿರು ಜಗತ್ತನ್ನೇ ಅಂಕೆಯಲ್ಲಿಟ್ಟುಕೊಳ್ಳಬಯಸಿದ್ದರು. ಸಹಜವಾಗಿಯೇ ರಾಜಕಾರಣಿಗಳಲ್ಲಿ, ಮುಂದಾಳುಗಳಲ್ಲಿ ನೈತಿಕತೆ, ಧಾರ್ಮಿಕತೆ ಕುಗ್ಗಿತ್ತು. ಸಾತ್ತ್ವಿಕರಿಗೆ, ಧಾರ್ಮಿಕರಿಗೆ ಬಲವೇ ಇಲ್ಲ ಎನ್ನುವಂತಾಗಿತ್ತು. ಜೂಜು, ಕುಡಿತ, ವ್ಯಸನ, ದಾಳಿ, ಯುದ್ಧ, ಕಳ್ಳತನ, ಮೋಸ-ವಂಚನೆ ಎಲ್ಲವೂ ತಾಂಡವವಾಡುತ್ತಿತ್ತು. ಗೀತೆಯಲ್ಲೇ ಹೇಳಿರುವಂತೆ, ಅಧರ್ಮ ಹೆಚ್ಚುತ್ತಿರುವಾಗಲೇ ಭಗವಂತ ಧರೆಗಿಳಿದು ಬಂದ. ಶ್ರೀಕೃಷ್ಣನ ಜೀವನದುದ್ದಕ್ಕೂ ಅನೇಕ ಅದ್ಭುತ ಘಟನೆಗಳು ನಡೆದವು; ಉತ್ತಮ ಜಗತ್ತಿನ ನಿರ್ಮಾಣಕ್ಕಾಗಿ ಅವನು ಅನೇಕ ಪರಿವರ್ತನೆಗಳನ್ನು ಮಾಡಬೇಕಾಯಿತು. ಸಮಸ್ತ ಭಾರತವೇ ಅವನ ಕಾರ್ಯರಂಗವಾಯಿತು. ಜಗತ್ತಿನಲ್ಲಿ ಶಾಂತಿ ನೆಲೆಸಿತು. ಆ ಯುಗದಲ್ಲಿ ನಡೆದ ಮಹತ್ತರವಾದ ಘಟನೆಯೇ ಮಹಾಭಾರತ ಯುದ್ಧ. ಹಿಂದೆಂದೂ ಕೇಳಿರದ, ಯಾರೊಬ್ಬನಿಗೂ ಊಹಿಸಲಾಗದ ರೀತಿಯಲ್ಲಿ, ಬೃಹತ್ ಪ್ರಮಾಣದಲ್ಲಿ ನಡೆದ ಆ ಯುದ್ಧದ ನಡುವೆ ಶ್ರೀಕೃಷ್ಣನ ಸಂದೇಶವೂ ಅಷ್ಟೇ ದಿವ್ಯವಾದುದು. ಅಲ್ಲಿ ನೀಡಿದ ಸಂದೇಶ ಮಾತ್ರ ಜಗದ್ವ್ಯಾಪಕವಾಯಿತು; ಭಗವಂತನ ನುಡಿ ಅಮರವಾಣಿಯಾಯಿತು. ಯುದ್ಧ ಮಾಡಲು ನಿಂತಿದ್ದ ಅರ್ಜುನನಿಗೆ ಸಂದೇಹ ಮೂಡಿತ್ತು: ತನ್ನ ಬಂಧುಬಾಂಧವರನ್ನು ಕೊಲ್ಲಲು ಹೊರಟ ತನ್ನ ಕೃತ್ಯ ಸರಿಯೆ? ತಪ್ಪೆ? ನೈತಿಕವಾಗಿ ತಾನು ಮಾಡುವುದು ಸರಿಯಾದುದೆ? ಅತ್ಯಂತ ನಿರ್ಣಾಯಕವಾದ, ಮಹತ್ತರವಾದ ಹಾಗೂ ಸಂದಿಗ್ಧದ ಕಾರ್ಯವನ್ನು ಎಸಗುವಾಗ ಎಂಥವರೂ ಒಂದು ಕ್ಷಣ ಯೋಚಿಸಬೇಕಾಗುತ್ತದೆ. ಈ ಬಗೆಯ ಸಂದೇಹ, ದ್ವಂದ್ವ ಎಲ್ಲರ ಜೀವನದಲ್ಲೂ ಒಂದಲ್ಲ ಒಂದು ಕ್ಷಣ ಬರುತ್ತದೆ. ಆದರೆ ಅದಕ್ಕೆ ಪರಿಹಾರ ಕಾಣದೆ, ಉತ್ತರ ಸಿಗದೆ, ಕಾರ್ಯವಿಮುಖರಾದಾಗ ಒಂದೊಂದು ವೇಳೆ ಎಂತಹ ಬೆಲೆಯನ್ನು ತೆರಬೇಕಾಗುವುದು ಎಂಬುದನ್ನು ಹಲವು ಉದಾಹರಣೆಗಳ ಮೂಲಕ ನಾವು ನೋಡಬಹುದು. ಆದರೆ ಅರ್ಜುನನಿಗೆ ಗೊಂದಲವನ್ನು ಪರಿಹರಿಸಲು ಸಾಕ್ಷಾತ್ ಭಗವಂತನೇ ಮುಂದೆ ಬಂದ. ಕಾರಣ, ಅರ್ಜುನ ಕೇವಲ ಒಬ್ಬ ಯೋಧ ಮಾತ್ರವೇ ಆಗಿರಲಿಲ್ಲ ; ವಿಷಮ ಪರಿಸ್ಥಿತಿಗೆ ಅಭಿಮುಖವಾಗಿ ನಿಂತ, ಸಮಸ್ತ ಮಾನವರ ಪ್ರತಿನಿಧಿಯಾಗಿದ್ದ. ಸಂದಿಗ್ಧ ಪರಿಸ್ಥಿತಿಯಲ್ಲಿ ದಿಕ್ಕುಗಾಣದೆ ಪರಿತಪಿಸುತ್ತಿದ್ದ ಮನಸ್ಸಿಗೆ ದಿವ್ಯ ಬೆಳಕಾಗಿ ಕಾಣಿಸಿಕೊಂಡದ್ದೇ ಶ್ರೀಕೃಷ್ಣನ 'ಗೀತೆ'.

## ರಣರಂಗದಲ್ಲಿ ಉಪದೇಶವೆ?

ಭಗವದ್ಗೀತೆ ಮಹಾಭಾರತದ ಒಂದು ಭಾಗ. ವ್ಯಾಸರು ಅದನ್ನು ಬರೆದಿಲ್ಲವೆಂದೂ, ಅನಂತರ ಯಾರೋ ಬರೆದು, ಗೀತೆಯನ್ನು ಮಹಾಭಾರತದಲ್ಲಿ ಸೇರಿಸಿಬಿಟ್ಟರು ಎಂದೂ ಆಧುನಿಕ ವಿದ್ವಾಂಸರಲ್ಲಿ ಕೆಲವರು ಹೇಳುತ್ತಾರೆ. ಯಾವುದೇ ಪುರಾವೆಗಳಿಲ್ಲದ ಈ 'ಅಭಿಪ್ರಾಯ'ವನ್ನು ಭಾರತೀಯ ಪರಂಪರೆ ಒಪ್ಪುವುದಿಲ್ಲ. ಅಷ್ಟೊಂದು ಭೀಕರ ಸನ್ನಿವೇಶಗಳಿಂದ ಕೂಡಿದ, ಅತ್ಯಂತ ಜಟಿಲ ಪರಿಸ್ಥಿತಿಯ ಯುದ್ಧಭೂಮಿಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಧರ್ಮೋಪದೇಶ ನೀಡುವುದೇ ಅಸಂಗತ; ಅದೂ ಹದಿನೆಂಟು ಅಧ್ಯಾಯಗಳಿಂದ ಕೂಡಿದ, ಏಳುನೂರು ಶ್ಲೋಕಗಳಷ್ಟು ದೀರ್ಘವಾದ ಗೀತೋಪದೇಶ — ಇದು ಆಧುನಿಕರು ಒಡ್ಡುವ ವಾದ. ಹಾಗಾಗಿ ಇದನ್ನು ಮುಂದೆ ಯಾರೋ ಸೇರಿಸಿರಬೇಕು ಎನ್ನುತ್ತಾರೆ. ಪುರಾವೆಗಳಿಲ್ಲದೆ ಏನನ್ನು ಖಚಿತವಾಗಿ ಸ್ವೀಕರಿಸಲಾಗದು ಎಂದು ಹೇಳುವ ಈ 'ವೈಜ್ಞಾನಿಕ'ರೇ ಇಂತಹ ಊಹಾಪೋಹವನ್ನು ನಿಜವೆಂದು ಸ್ವೀಕರಿಸಿರುವುದೇ ವಿಪರ್ಯಾಸ !

ಇದಕ್ಕೆ ಶಕ್ತಿಯುತವಾದ ಉತ್ತರವನ್ನು ಕೊಟ್ಟಿದ್ದಾರೆ, ನಮ್ಮ ಸಾಂಪ್ರದಾಯಿಕ ವಿದ್ವಾಂಸರು: ಗೀತೆಯನ್ನು ವ್ಯಾಸರು (ಅಥವಾ ಬೇರೆ ಯಾರೇ ಆಗಿರಲಿ) ಬರೆದರು ನಿಜ ; ಆದರೆ ರಣರಂಗದಲ್ಲಿ ಶ್ರೀಕೃಷ್ಣನು ಏಳುನೂರು ಶ್ಲೋಕಗಳನ್ನು ಒಂದೊಂದಾಗಿ ಹೇಳಿದ ಎಂದಾದರೆ ಮಾತ್ರ ಅದು ಅಸಂಗತವಾದೀತು. ಆದರೆ ಅವನು 'ಹೇಳಿದ್ದು' ಶ್ಲೋಕಗಳನ್ನಲ್ಲ; ಅದು 'ನೀಡಿದ್ದು' - ದಿವ್ಯ ಜ್ಞಾನವನ್ನು. ಅರ್ಜುನನ ಭ್ರಾಂತಿಯನ್ನು ಹೋಗಲಾಡಿಸಲು ದಿವ್ಯ ಜ್ಞಾನ ನೀಡಲು ಹೆಚ್ಚು ಸಮಯ ಬೇಕಿಲ್ಲ. ಕೆಲವೇ ಕ್ಷಣಗಳು ಸಾಕು. (ಅಲೌಕಿಕ ಜ್ಞಾನ ಉಂಟಾಗಲು ಒಂದೇ ಕ್ಷಣ ಸಾಕು ಎನ್ನುತ್ತಾರೆ). ಇದನ್ನು ಮುಂದೆ ವ್ಯಾಸರೇ ವಿಸ್ತಾರವಾಗಿ ಏಳುನೂರು ಶ್ಲೋಕಗಳಲ್ಲಿ ಬರೆದಿರಬಹುದು. ಇದರಲ್ಲಿ ಯಾವುದೇ ಅಸಂಗತತೆ ಇಲ್ಲ.

ಈ ಎರಡನೇ ಅಭಿಪ್ರಾಯದಲ್ಲಿ ದಿವ್ಯಜ್ಞಾನದ ಸಂವಹನಕ್ಕೆ ಪ್ರಾಮುಖ್ಯತೆ ನೀಡಲಾಗಿದೆ. ಭಗವಂತನ ಸರ್ವಶಕ್ತತೆ ಹಾಗೂ ಗುರು-ಶಿಷ್ಯಂದಿರ ನಡುವಿನ ಆಧ್ಯಾತ್ಮಿಕ ಕೊಡುಕೊಳ್ಳುವಿಕೆ ಭೌತಿಕ ನೆಲೆಯನ್ನು ಮೀರಿದ ಒಂದು ವಿಚಾರ ಎಂಬುದನ್ನು ಈ ಅಭಿಪ್ರಾಯವು ಮೊದಲೇ ಒಪ್ಪಿಕೊಂಡಿದೆ. ಭೌತಿಕ ಮಿತಿಯಾಚೆಗೆ ಹೋಗಲೊಪ್ಪದ ವೈಜ್ಞಾನಿಕರು ಈ ವಾದವನ್ನು ಸ್ವೀಕರಿಸಲಾರರು; ಆದ್ದರಿಂದ ಈ ಬಗೆಯ ಚಿಂತನೆ ಅವರಿಂದ ದೂರವೇ ಉಳಿಯುತ್ತದೆ.

## ಮನುಕುಲಕ್ಕೆ ಶಿಕ್ಷಣ

ಸಮಸ್ತ ಮಾನವಕುಲವನ್ನು ದೃಷ್ಟಿಯಲ್ಲಿಟ್ಟುಕೊಂಡು ಅರ್ಜುನನ ವಿಷಾದ ಹಾಗೂ ಶ್ರೀಕೃಷ್ಣನ ಗೀತೋಪದೇಶವನ್ನು ಗಮನಿಸಬೇಕು — ಆಗ ಗೀತೆಯ ಮಹತ್ವ ಇನ್ನಷ್ಟು ಉಜ್ಜ್ವಲವಾಗಿ ಬೆಳಗುತ್ತದೆ. ಮಾನವರಲ್ಲಿ ಎಲ್ಲರೂ ಒಂದಲ್ಲ ಒಂದು ಕಾರಣದಿಂದ, ಒಂದಲ್ಲ ಒಂದು ಸಂದರ್ಭದಲ್ಲಿ ಸಂದಿಗ್ಧತೆ, ವಿಷಾದ, ಭಯ, ತಲ್ಲಣಗಳಿಗೆ ಒಳಗಾಗುತ್ತಾರೆ. ಏನು ಮಾಡಬೇಕು ಎಂಬುದೇ ಅರ್ಥವಾಗದೆ ಪರಿತಪಿಸುತ್ತಾರೆ. ಕೆಲವರು ಆತ್ಮಹತ್ಯೆಗೆ ಶರಣಾಗುತ್ತಾರೆ, ಇನ್ನು ಅನೇಕರು ಸನ್ನಿವೇಶವನ್ನು ಎದುರಿಸಲಾಗದೆ ಪಲಾಯನವಾದ ಮಾಡುತ್ತಾರೆ. ಸನ್ನಿವೇಶವನ್ನು ಎದುರಿಸಿ ಮುನ್ನುಗ್ಗುವ ಧೈರ್ಯವಿರುವವರು ಕೆಲವೇ ಮಂದಿ. ಭೀರುಗಳಿಗೆ ಸರಿಯಾದ ಶಿಕ್ಷಣ ನೀಡುವ ಮಾತುಗಳು ಗೀತೆಯಲ್ಲಿವೆ. ''ಹೇಡಿತನವನ್ನು ಹೊಂದಬೇಡ, ಧೈರ್ಯ ತಾಳು. ರಣರಂಗದಲ್ಲಿ ಧೀರನಾಗಿ ಮುನ್ನುಗ್ಗು'' ಎಂಬ ಸ್ಫೂರ್ತಿಯ ಮಾತುಗಳು ಇಲ್ಲಿವೆ. ಹುಟ್ಟು-ಸಾವು, ಸುಖ-ದುಃಖ, ಸೋಲು-ಗೆಲುವು ಮುಂತಾದ ದ್ವಂದ್ವಗಳನ್ನು ದಾಟಿ, ಸಮಸ್ಥಿತಿಯಲ್ಲಿದ್ದುಕೊಂಡು ಜೀವನವನ್ನು ನಡೆಸಲು ಬೇಕಾದ ತಾತ್ತ್ವಿಕ ದೃಷ್ಟಿಯನ್ನು ಗೀತೆ ನೀಡುತ್ತದೆ. ಜೀವನದಲ್ಲಿ ಶಾಂತಿ, ಸೌಖ್ಯ, ನೆಮ್ಮದಿಗಳನ್ನು ಹೊಂದಲು ಅಗತ್ಯವಾದ ಮಾನಸಿಕ ಸಿದ್ಧತೆ, ಅಭ್ಯಾಸ-ವೈರಾಗ್ಯಗಳಂತಹ ಅನುಷ್ಠಾನ ಯೋಗ್ಯವಾದ ಸಲಹೆಗಳು, ಭಕ್ತಿ-ಕರ್ಮ-ಧ್ಯಾನಗಳಂತಹ ಆಧ್ಯಾತ್ಮಿಕ ಸಾಧನೆಗಳ ಅಗತ್ಯ ಇವುಗಳನ್ನೂ ಇಲ್ಲಿ ಬೋಧಿಸಲಾಗಿದೆ. ಇಷ್ಟು ವೈವಿಧ್ಯಮಯವಾದ, ಸಮಗ್ರವಾದ ಹಾಗೂ ಉಪಯುಕ್ತವಾದ ವಿಚಾರಗಳು ಒಂದೆಡೆ ಸಿಗುವುದು ಪ್ರಪಂಚದ ಧಾರ್ಮಿಕ ಗ್ರಂಥಗಳಲ್ಲಿ ವಿರಳವೆ — ಬಹುಶಃ ಇದ್ದರೆ ಗೀತೆಯಲ್ಲಿ ಮಾತ್ರ.

## ಅನುಚಿತವಾದ ಟೀಕೆಗಳು

ಗೀತೆಯ ವಿಷಯವಾಗಿ ಕೆಲವೊಂದೆ ಟೀಕೆಗಳು ಬಂದಿವೆ. ಒಂದನೆಯದು, ಇಲ್ಲಿ 'ಯುದ್ಧ ಮಾಡು' ಎಂದು ಹೇಳಿರುವುದರಿಂದ ಇದು ಹಿಂಸೆ, ಕ್ರೌರ್ಯಗಳಿಗೆ ಪ್ರಚೋದನೆ ನೀಡುತ್ತದೆ; ಆದ್ದರಿಂದ ಇದನ್ನು ಮಾನವನ ಒಳಿತಿಗಾಗಿ ಬಳಸಲಾಗದು ಎಂಬ ಅಭಿಪ್ರಾಯ. ಎರಡನೆಯದು, 'ಚಾತುರ್ವರ್ಣ್ಯಂ ಮಯಾ ಸೃಷ್ಟಂ' ಎಂಬಲ್ಲಿ ವರ್ಣವ್ಯವಸ್ಥೆಯನ್ನು ತಾನೇ ರಚಿಸಿದ್ದೇನೆ ಎಂದು ಭಗವಂತನು ಹೇಳುವ ಮೂಲಕ, ಸಮಾಜದಲ್ಲಿ ಅಸಮಾನತೆಯನ್ನು ಪುರಸ್ಕರಿಸಿದಂತಾಗಲಿಲ್ಲವೆ?

ಈ ಎರಡೂ ವಾದಗಳಲ್ಲಿ ಹುರುಳಿಲ್ಲ. ಗೀತೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಇದ್ದಾಗ ಇಂಥ ಅಭಿಪ್ರಾಯಗಳು ಬರುತ್ತವೆ. ಪ್ರಧಾನವಾಗಿ, ಧಾರ್ಮಿಕ ದೃಷ್ಟಿಯಿಲ್ಲದ ಚಿಂತಕರು ಹಾಗೂ ಹಿಂದೂ ಧಾರ್ಮಿಕತೆಯನ್ನು ವಿರೋಧಿಸುವವರು ಇಂಥ ವಿವಾದಗಳನ್ನು ಹುಟ್ಟುಹಾಕುತ್ತಾರೆ. ಮೊದಲನೆಯ ಅಭಿಪ್ರಾಯಕ್ಕೆ ಉತ್ತರವೆಂದರೆ, ಯುದ್ಧ ಹಾಗೂ ಕ್ರೌರ್ಯದ ಪ್ರಚೋದನೆ ಗೀತೆಯಲ್ಲಿ ಎಲ್ಲೂ ಕಂಡುಬರುವುದಿಲ್ಲ. 'ಯುದ್ಧ ಮಾಡು' ಎಂಬ ಶ್ರೀಕೃಷ್ಣನ ಮಾತು ಆ ಸನ್ನಿವೇಶದಲ್ಲಿ ಆಡಿದ ಮಾತಷ್ಟೇ ಆಗಿದೆ; ಹೇಡಿಯಾಗಬೇಡ, ಕಾರ್ಯಪ್ರವೃತ್ತನಾಗು; ಯೋಧನಾದವನಿಗೆ ಯುದ್ಧ ಮಾಡುವುದೇ ಧರ್ಮ; ಅದರಿಂದಲೇ

ಅವನು ಸದ್ಗತಿಯನ್ನು ಹೊಂದುವನು. ಹಾಗೆಂದ ಮಾತ್ರಕ್ಕೆ ಯುದ್ಧವನ್ನು ಮಾಡಬೇಕು ಎಂದ ಹಾಗಾಗಲಿಲ್ಲ. ಯುದ್ಧ ಎಂಬುದು ಅನಾಹುತಕಾರಿ, ಅದು ಮನುಕುಲಕ್ಕೆ ಮಾರಕ ಎಂಬುದನ್ನು ಎಲ್ಲ ಮಾನವತಾವಾದಿಗಳೂ ಒಪ್ಪುತ್ತಾರೆ. ಆದರೆ ಹಾಗೆ ಹೇಳುವವರ ದೇಶವೇ ಸೈನ್ಯಕ್ಕಾಗಿ ಎಷ್ಟು ಕೋಟಿ ಮೊತ್ತವನ್ನು ವಿನಿಯೋಗಿಸುತ್ತದೆ? ಯುದ್ಧವಿರಬಾರದು ಎಂಬುದು ನಿಜ; ಆದರೆ ಪ್ರಜೆಗಳ ರಕ್ಷಣೆಗಾಗಿ ಸೈನ್ಯ ಅತ್ಯಗತ್ಯ. ಸಂದರ್ಭ ಬಂದಾಗ ಅವರು ಯುದ್ಧಮಾಡುವುದೂ ಅಷ್ಟೇ ಮುಖ್ಯ. ಅರಾಜಕತೆ ಸೃಷ್ಟಿಸುವ ಶಕ್ತಿಗಳನ್ನು ಬಗ್ಗುಬಡಿಯುವುದು ಯುದ್ಧ, ಕ್ರೌರ್ಯ, ಹಿಂಸೆ ಅನ್ನಿಸುವುದಿಲ್ಲ. ಅದಕ್ಕೆ 'ರಕ್ಷಣಾವ್ಯವಸ್ಥೆ' ಎನ್ನುತ್ತಾರೆ. ಟೀಕಾಕಾರರು ಇದನ್ನು ಅರ್ಥಮಾಡಿಕೊಳ್ಳುವುದು ಒಳಿತು.

ಎರಡನೇ ಟೀಕೆಗೆ ಉತ್ತರ: ಚಾತುರ್ವರ್ಣ್ಯವೆಂಬುದು ಆಗ ಪ್ರಚಲಿತವಾಗಿದ್ದ ಸಾಮಾಜಿಕ ವ್ಯವಸ್ಥೆ. ಕರ್ಮಕ್ಕನುಗುಣವಾಗಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ , ಶೂದ್ರ – ಎಂಬ ವಿಭಜನೆಯಿಂದ ಸಾಮಾಜಿಕ ಸ್ಥಿತಿಗತಿ ಕಾಪಾಡಲ್ಪಡುತ್ತದೆ. ಈ ಆಧುನಿಕ ಕಾಲದಲ್ಲೂ ವಿದ್ಯೆ, ರಾಜಕೀಯ, ವ್ಯಾಪಾರ, ದೈಹಿಕ ಕೆಲಸ – ಇವನ್ನು ಮಾಡುವ ವಿವಿಧ ವರ್ಗಗಳಿವೆ; ಎಲ್ಲ ಬಗೆಯ ಉದ್ಯೋಗಗಳೂ ಈ ನಾಲ್ಕರಲ್ಲಿ ಅಡಕವಾಗುತ್ತವೆ. ಈ ದೃಷ್ಟಿಯಿಂದ ಒಂದೊಂದು ವರ್ಣಗಳ ಪ್ರಕಾರ ಜನರ ಜೀವನಕ್ರಮವಿರುತ್ತದೆ. ಇದಕ್ಕನುಗುಣವಾಗಿ ಕಾನೂನು, ನಿಯಮ, ನಡುವಳಿಕೆಗಳು ಸಮಾಜವನ್ನು ನಡೆಸಬೇಕು. ಈ ನಾಲ್ಕೂ ಅಂಗಗಳು ಸೇರಿ ಒಟ್ಟು ಸಮಾಜವಾಗುತ್ತದೆ. ಇದನ್ನು ಒಪ್ಪಿಕೊಂಡು ಸಮಾಜವನ್ನು ಸೂಕ್ತ ರೀತಿಯಲ್ಲಿ ವ್ಯವಸ್ಥಿತವಾಗಿ ಮುನ್ನಡೆಸುವ ಶಕ್ತಿ ತಾನೆಂದು ಶ್ರೀಕೃಷ್ಣ ಇಲ್ಲಿ ಹೇಳುತ್ತಾನೆ. ಜಾತಿಪದ್ಧತಿ, ಅದರಿಂದ ಉಂಟಾದ ಹಾನಿ ಮಧ್ಯಕಾಲೀನ ಭಾರತದಲ್ಲಿ ಉಂಟಾಗಿರುವ ಅನಾಹುತಗಳು. ಆಗ ಅನೇಕ ಪರಕೀಯ ಆಕ್ರಮಣಗಳು ನಡೆದಿದ್ದು, ಭಾರತದ ರಾಜಕೀಯ-ಸಾಮಾಜಿಕ ಪರಿಸ್ಥಿತಿ ಬದಲಾಗಿತ್ತು. ಗೀತೆಯಲ್ಲಿ ಹೇಳಿರುವ ಚಾತುರ್ವರ್ಣ್ಯಕ್ಕೂ ಜಾತಿವ್ಯವಸ್ಥೆಗೂ ಸಂಬಂಧವಿಲ್ಲವೆಂಬುದನ್ನು ಇತಿಹಾಸವು ಸ್ಪಷ್ಟವಾಗಿ ತಿಳಿಸುತ್ತದೆ.

### ಜನಜೀವನದಲ್ಲಿ ಭಗವದ್ಗೀತೆ

ಆಧುನಿಕ ಭಾರತದ ನಿರ್ಮಾಣದಲ್ಲಿ ಭಗವದ್ಗೀತೆ ಅತ್ಯಂತ ಮಹತ್ವದ ಪಾತ್ರ ವಹಿಸಿದೆ. ಪುರಾತನ ಕಾಲದಿಂದಲೇ ಭಾರತದ ಪವಿತ್ರ ಗ್ರಂಥವೆಂದು ಪೂಜ್ಯಸ್ಥಾನ ಪಡೆದಿದ್ದ ಗೀತೆಯನ್ನು ನಮ್ಮ ಪರಂಪರೆ 'ಪ್ರಸ್ಥಾನತ್ರಯ'ಗಳಲ್ಲಿ ಒಂದಾಗಿ ಸ್ವೀಕರಿಸಿದೆ. ಸ್ವಾಮಿ ವಿವೇಕಾನಂದರು ಹೇಳುವಂತೆ, ಭಾರತದಲ್ಲಿ ಇಂದು ಉಳಿದಿರುವ ಅನುಷ್ಠಾನ ಧರ್ಮವೆಂದರೆ, ವೇದಾಂತವೊಂದೇ. ವೇದಾಂತವು ಉಪನಿಷತ್ತುಗಳು, ಬ್ರಹ್ಮಸೂತ್ರ ಹಾಗೂ ಭಗವದ್ಗೀತೆ ಇವು ಮೂರನ್ನೂ ಆಧಾರ ಕೃತಿಗಳೆಂದು ಪರಿಗಣಿಸಿ 'ಪ್ರಸ್ಥಾನತ್ರಯ'ಗಳೆಂದು ಕರೆದಿದೆ. ವೇದಾಂತ ಮತಗಳು ಭಾರತೀಯ ಜನಜೀವನದಲ್ಲಿ ಹಲವು ಸಂಪ್ರದಾಯಗಳನ್ನು ರೂಪಿಸಿವೆ. ಈ ಮೂಲಕ ಭಗವದ್ಗೀತೆಯು ಭಾರತದ ಎಲ್ಲ ಸಂಪ್ರದಾಯಗಳಲ್ಲಿ ಪ್ರಮಾಣಗ್ರಂಥವೆನಿಸಿದೆ. ಆಚಾರ್ಯ ಶಂಕರರೇ ಮೊದಲಾದವರು ಆಯಾ ಮತಗಳಿಗೆ ಅನುಗುಣವಾಗಿ ಗೀತೆಗೆ ಭಾಷ್ಯಗಳನ್ನು ಬರೆದರು; ಈ ಮೂಲಕ ಗೀತೆಗೆ ಸೂಕ್ತವಾದ ವಿವರಣೆ ನೀಡಿದಂತಾಯಿತು; ಜೊತೆಗೆ ಆಯಾ ಸಂಪ್ರದಾಯಗಳಿಗೆ ಯೋಗ್ಯವಾದ ತಾತ್ತ್ವಿಕತೆಯನ್ನು ರೂಪಿಸಿದಂತಾಯಿತು. ಮತಭೇದ, ಅಭಿಪ್ರಾಯಗಳೇನಿದ್ದರೂ ಆಯಾ ಸಂಪ್ರದಾಯಗಳಲ್ಲಿ ಮಾತ್ರ ಉಳಿದಿವೆ; ಆದರೆ ಗೀತೆಯ ಒಟ್ಟು ಅಭಿಪ್ರಾಯ ಎಲ್ಲರ ಜನಜೀವನದಲ್ಲಿ ಒಂದಲ್ಲ ಒಂದು ರೀತಿ ಹರಿದು ಬಂತು.

ಆಧುನಿಕ ಜೀವನದಲ್ಲಿ ಭಗವದ್ಗೀತೆಯನ್ನು ಹತ್ತು ಹಲವು ರೀತಿಗಳಲ್ಲಿ ಅಳವಡಿಸಿಕೊಂಡರೆ, ಅದರಿಂದ ನಮ್ಮ ವೈಯಕ್ತಿಕ ಬದುಕಿನಲ್ಲೂ, ಸಾಮಾಜಿಕ ಜೀವನದಲ್ಲೂ ಅಸಾಧಾರಣ ಪರಿವರ್ತನೆಯಾಗುವುದು. ಅನೇಕ ಸಂಘಸಂಸ್ಥೆಗಳು, ಶಾಲೆ ಕಾಲೇಜುಗಳು, ಆಶ್ರಮ-ದೇವಾಲಯಗಳು ಗೀತಾ ಕಂಠಪಾಠ ಸ್ಪರ್ಧೆ, ಪ್ರಬಂಧ ಸ್ಪರ್ಧೆ ಇತ್ಯಾದಿಗಳನ್ನು ಏರ್ಪಡಿಸುತ್ತವೆ. ಹಲವು ಕಡೆ ಪ್ರತಿದಿನ ಗೀತಾಭ್ಯಾಸ ಮಾಡಿಸುವ ಪರಿಪಾಠವಿದೆ. ನಮ್ಮ ಸಂಸ್ಕೃತಿಯ ರಕ್ಷಣೆಗೆ, ಸಾಮಾಜಿಕ ಜೀವನದ ಉನ್ನತಿಗೆ ಇವು ಅತ್ಯಂತ ಮುಖ್ಯವಾದವು, ನಿಜ. ಇದರೊಂದಿಗೆ ಗೀತೆಯ ಅರ್ಥವನ್ನೂ ಸರಿಯಾಗಿ ತಿಳಿಸಿಕೊಡುವ ಕಾರ್ಯ ನಡೆಯಬೇಕು. ಅರ್ಥವನ್ನರಿಯದ 'ಗಿಣಿಪಾಠ'ದಿಂದ ಹೆಚ್ಚಿನ ಲಾಭವಿಲ್ಲ; ಅದೇ, ಅರ್ಥವನ್ನರಿತು ಎಲ್ಲ ಬಗೆಯ ಅಭ್ಯಾಸಗಳೂ ನಡೆಯಬೇಕು. ಅದರಿಂದ ಹೆಚ್ಚಿನ ಲಾಭವಿದೆ. ಭಾರತೀಯ ಜೀವನದಲ್ಲಿ ಗೀತೆಯನ್ನು ಬಿಟ್ಟು ಬದುಕಿಲ್ಲ — ಇದು ಮತ್ತೆ ಮತ್ತೆ ಪ್ರಮಾಣಿತವಾದ ಸತ್ಯ. ಈ ಕಾರಣದಿಂದಲೇ ಶ್ರೀರಾಮಕೃಷ್ಣರು, ಸ್ವಾಮಿ ವಿವೇಕಾನಂದರು ಗೀತೆಯ ಮಹತ್ವವನ್ನು ಸಾರಿದರು. ಇತರ ಸಾಧು, ಸಂತರುಗಳೂ ಗೀತೆಯ ಭವ್ಯತೆ ಹಾಗೂ ದಿವ್ಯತೆಯನ್ನು ಕುರಿತು ಕೊಂಡಾಡಿದರು. ಗೀತೆಯ ಸಾರವನ್ನು ಅರಿತು, ಅದನ್ನು ನಮ್ಮ ದೈನಂದಿನ ಜೀವನದಲ್ಲಿ ಸಾಧ್ಯವಾದಷ್ಟು ಅನುಸರಿಸಿ ಬದುಕುವುದನ್ನು ನಾವೆಲ್ಲ ರೂಢಿಸಿಕೊಳ್ಳಬೇಕು. ಆಗಲೇ ನಮಗೆ ಗೀತೆ ಸರಿಯಾಗಿ ಅರ್ಥವಾದಂತೆ.

### ಜನವರಿ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೧ | ಶನಿವಾರ | ಕಲ್ಪತರು ದಿನಾಚರಣೆ |
| ೮ | ಶನಿವಾರ | ಸ್ವಾಮಿ ಶಾರದಾನಂದ ಜಯಂತಿ |
| ೧೨ | ಬುಧವಾರ | ರಾಷ್ಟ್ರೀಯ ಯುವ ದಿನಾಚರಣೆ |
| ೧೩ | ಗುರುವಾರ | ಏಕಾದಶಿ |
| ೧೬ | ಭಾನುವಾರ | ಸ್ವಾಮಿ ತುರೀಯಾನಂದ ಜಯಂತಿ |
| ೨೫ | ಮಂಗಳವಾರ | ಸ್ವಾಮಿ ವಿವೇಕಾನಂದ ಜಯಂತಿ |
| ೨೮ | ಶುಕ್ರವಾರ | ಏಕಾದಶಿ |